**ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.**

**ಅಪರಾಧ ಪ್ರಕರಣ ಸಂಖ್ಯೆಃ 623/2018**

| | | |
|---|---|---|
| **ಹೆಸರು** | ಅಣ್ಣಯ್ಯ | ಚಾಸಾ-2 |
| **ತಂದೆಯ ಹೆಸರು** | ಹುಚ್ಚಯ್ಯ | |
| **ಉದ್ಯೋಗ** | ವ್ಯವಸಾಯ | ಪ್ರಾಸಾ-2 |
| **ವಾಸ ಸ್ಥಳ** | ಮುತ್ತಿಗೆ ಗ್ರಾಮ | |
| **ದಿನಾಂಕಃ 10.10.2024**ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಆರೋಪಿಯ ಪರಿಚಯ ನನಗೆ ಇರುತ್ತದೆ. ಸುಮಾರು 30 ವರ್ಷಗಳ ಹಿಂದೆ ನಾನು ಸರ್ವೆ ನಂ.130/3 ಮುತ್ತಿಗೆ ರಲ್ಲಿರುವ ಜಮೀನನ್ನು ನಾನು ಬೊಮ್ಮಯ್ಯ ಮತ್ತು ಆತನ ಮಗನಿಂದ ನಾನು ಕ್ರಯಕ್ಕೆ ಪಡೆದಿರುತ್ತೇನೆ. ಅಂದಿನಿಂದಲೂ ನಾನು ಸದರಿ ಜಮೀನಿನ ಉಳುಮೆ ಮಾಡುತ್ತಿರುತ್ತೇನೆ. ಸುಮಾರು 5 ವರ್ಷಗಳ ಹಿಂದೆ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ಟ್ರಾಕ್ಟರ್ ನಲ್ಲಿ ಸದರಿ ಜಮೀನನ್ನು ಉಳುಮೆ ಮಾಡುತ್ತಿದ್ದಾಗ ಆರೋಪಿಯು ಆ ಜಮೀನು ಅವರದು ಎಂದು ಉಳುಮೆ ಅಡ್ಡಪಡಿಸಿರುತ್ತಾರೆ. ನಂತರ ನಾವು ಟ್ರಾಕ್ಟರ್ ನ್ನು ಪಕ್ಕಕ್ಕೆ ನಿಲ್ಲಿಸಿದೆವು. ಸದರಿ ಟ್ರಾಕ್ಟರ್ ನಿಂದ 20 ಮೀಟರ್ ಅಂತರದಲ್ಲಿ ಆರೋಪಿಯು ನನ್ನ ಹೆಂಡತಿಯ ಬಲಗೈನ ಕಿರುಬೆರಳನ್ನು ಕಚ್ಚಿರುತ್ತಾರೆ. ನಂತರ ನನ್ನ ಹೆಂಡತಿ ಟ್ರಾಕ್ಟರ್ ಬಳಿ ಬಂದು ಬಿದ್ದು ಹಲ್ಲನ್ನು ಮುರಿದುಕೊಂಡಿರುತ್ತಾರೆ. ನಾನು ನನ್ನ ಹೆಂಡತಿಯನ್ನು ಕರೆದುಕೊಂಡು ಸರ್ಕಾರಿ ಆಸ್ಪತ್ರೆಗೆ ಬಂದು ಅಡ್ಮಿಟ್ ಆಗಿರುತ್ತೇನೆ. ಈ ವಿಚಾರವಾಗಿ ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಯಾವ ದಿನಾಂಕದಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ತಿಳಿದಿರುವುದಿಲ್ಲ ಆದರೆ ಆಸ್ಪತ್ರೆಗೆ ಅಡ್ಮಿಟ್ ಆದ ದಿನಾಂಕದಂದು ನೀಡಿರುತ್ತೇನೆ.

1) ನಿಪಿ 2 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು.

ಕೃತ್ಯ ನಡೆದ 3 ದಿನಗಳ ನಂತರ ಪೊಲೀಸರು ಜಮೀನಿನ ಹತ್ತಿರ ಬಂದಿದ್ದು ನಾನು ಆಗ ನಿಪಿ 2(ಬಿ) ರಲ್ಲಿರುವ ಸಹಿಯನ್ನು ಜಮೀನಿನಲ್ಲಿ ಹಾಕಿರುತ್ತೇನೆ. ಪೊಲೀಸರು 4 ಗಂಟೆ

ಸಮಯಕ್ಕೆ ಬಂದಿರುತ್ತಾರೆ. ಆ ದಿನ ನನ್ನೊಂದಿಗೆ ನನ್ನ ಹೆಂಡತಿ ಮತ್ತು ಈರಯ್ಯ ಎಂಬುವರು ಇದ್ದರು. ಮಹಜರ್ ನಲ್ಲಿ ಬರೆದಿರುವ ಸಂಗತಿಗಳ ಮಾಹಿತಿ ನನಗೆ ತಿಳಿದಿರುತ್ತದೆ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಸಾಕ್ಷಿಗೆ ಭಾಗಶಃ ಸಾಕ್ಷಿಯನ್ನು ನುಡಿಯುತ್ತಿರುವುದರಿಂದ ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕ ರವರಿಂದ.**

ದಿನಾಂಕ 12.06.2018 ರಂದು ಪೊಲೀಸರು ಮಹಜರ್ ಗೆ ಬಂದಿರುತ್ತಾರೆ ಎಂದರೆ ಸರಿ. ಆ ದಿನ ಪೊಲೀಸರು 10.00 ಗಂಟೆಗೆ ಮಹಜರ್ ಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು 4 ಗಂಟೆಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 18.05.2018 ರಂದು ಮಧ್ಯಾಹ್ನ 12.30 ರಿಂದ 1.00 ಗಂಟೆ ಸಮಯಕ್ಕೆ ಜಗಳವಾಗಿರುತ್ತದೆ ಎಂದರೆ ಸರಿ. ಆರೋಪಿಯು ನನ್ನ ಹೆಂಡತಿಗೆ ಬೈದಿರುತ್ತಾರೆ ಎಂದರೆ ಸಾಕ್ಷಿಯು ಬೈದಿರಬಹುದು ಎಂದು ನುಡಿಯುತ್ತಾರೆ. ಆರೊಪಿಯು ನನ್ನ ಹೆಂಡತಿಗೆ ಕೈಯಿಂದ ಮೈಕೈ ಮತ್ತು ಎದೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿಯು ನನ್ನ ಹೆಂಡತಿಯ ಬಲಗೈನ ಕಿರುಬೆರಳನ್ನು ಕಚ್ಚಿ ರಕ್ತಗಾಯಪಡಿಸಿರುತ್ತಾರೆ ಮತ್ತು ನಾನು ಅದನ್ನು ನೋಡಿರುತ್ತೇನೆ ಎಂದರೆ ಸರಿ. ಆಗ ಜವರಯ್ಯನ ಮಗ ಈರಯ್ಯ ಮತ್ತು ಟ್ರಾಕ್ಟರ್ ನ ಚಾಲಕ ಜಗಳ ಬಿಡಿಸಿದರು ಎಂದರೆ ಸರಿ. ಈ ವಿಷಯವನ್ನು ನಾನು ಪೊಲೀಸರಿಗೆ ದಿನಾಂಕ 12.06.2018 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್.ಸಿ ವಕೀಲರಿಂದಃ**

ನನಗೆ 55 ವರ್ಷ ವಯಸ್ಸು. ನನ್ನ ತಂದೆಯ ಹೆಸರು ಹುಚ್ಚಯ್ಯ. ಮಹಜರ್ ನಲ್ಲಿ ಅಣ್ಣಯ್ಯ ಬಿನ್ ಈರಯ್ಯ, 38 ವರ್ಷ ಎಂದು ಬರೆದಿರುತ್ತಾರೆ ಹಾಗಾಗಿ ಸದರಿ ಸಾಕ್ಷಿಯು ನಾನು ಅಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಹುಚ್ಚಯ್ಯ ಈರಯ್ಯ ಅಲ್ಲ ಎಂದು ನುಡಿಯುತ್ತಾರೆ. ನಿಪಿ 2(ಬಿ) ರಲ್ಲಿರುವ ಸಹಿಯು ನನ್ನದಲ್ಲ. ಮಹಜರ್ ಮಾಡಲಾಗಿದೆ ಎಂದು ಹಗೇಳುತ್ತಿರುವ ಜಾಗದ ಚಕ್ಕುಬಂದಿ ನನಗೆ ಗೊತ್ತಿರುತ್ತದೆ. ಪೂರ್ವಕ್ಕೆಃಮಲ್ಲಸ್ವಾಮಿ, ಪಶ್ಚಿಮಕ್ಕೆಃಶಿವಪ್ಪ, ದಕ್ಷಿಣಕ್ಕೆಃ ದೇವರ ಜಮೀನು, ಉತ್ತರಕ್ಕೆಃಅನಂತರಾಮಯ್ಯರವರ ಜಮೀನು. ಸದರಿ ಮಹಜರ್ ನಲ್ಲಿ ನಾನು ಮೇಲೆ ಹೇಳಿದ ರೀತಿ ಚಕ್ಕುಬಂದಿ ಇರುವುದಿಲ್ಲ ಎಂದರೆ ಸಾಕ್ಶ್ಮಿಯು ಮೇಲೆ ಹೇಳಿದ ಚಕ್ಕುಬಂದಿ ನನ್ನ ಜಮೀನಿನದು ಎಂದು ನುಡಿಯುತ್ತಾರೆ. ಪೊಲೀಸರು ಮಹಜರ್ ಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಮಹಜರ್ ಗೆ ಕೃತ್ಯ ನಡೆದ 2 - 3 ದಿನಗಳ ನಂತರ ಬಂದಿರುತ್ತಾರೆ. ಕೃತ್ಯ ನಡೆದ 6 ದಿನಗಳ ನಂತರ ಪೊಲೀಸರು ಬಂದಿರುತ್ತಾರೆಯೇ ಎಂದರೆ ಸಾಕ್ಷಿಯು ಪೊಲೀಸರು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಉಳುಮೆ ಮಾಡಲು ಟ್ರಾಕ್ಟರನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ. ಟ್ರಾಕ್ಟರ್ ಚಾಲಕನ ಹೆಸರು ಅಥವಾ ಟ್ರಾಕ್ಟರನ

ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಆ ದಿನ ಟ್ರಾಕ್ಟರ್ ಒಂದು ಗಂಟೆಗಳ ಕಾಲ ಇತ್ತು. ಟ್ರಾಕ್ಟರ್ ನ ಬಾಡಿಗೆ ನೀಡಿರುತ್ತೇನೆ.

ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆದರೆ ಯಾವ ದಿನಾಂಕಂದು ಎಂಬುದು ನನಗೆ ತಿಳಿದಿರುವುದಿಲ್ಲ. 3 – 4 ದಿನಗಳ ನಂತರ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಉಳುಮೆ ಮಾಡುತ್ತಿದ್ದೆವು ಎಂದು ಹೇಳುತ್ತಿರುವ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೆವು, ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಸರ್ವೆ ನಂ.13/3 ಎಂದು ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಸದರಿ ಜಮೀನಿನ ಪೈಕಿ 17 ಗುಂಟೆ ಜಮೀನನ್ನು ನಮ್ಮ ಗ್ರಾಮದ ಈರಯ್ಯ ಎಂಬುವರಿಗೆ ಬೋಗ್ಯಕ್ಕೆ ಕೊಟ್ಟಿರುತ್ತೇವೆ ಎಂದು ಹೇಳಿಕೆ ನೀಡಿರುವುದಿಲ್ಲ. ಹೇಳಿಕೆಯಲ್ಲಿ ಬರೆದಿರುವ ಸಂಗತಿಗಳ ಮಾಹಿತಿ ನನಗೆ ಇರುವುದಿಲ್ಲ ಎಂದರೆ ಸಾಕ್ಷಿಯು ಪೊಲೀಸರು ಹೇಳಿಕೆಯನ್ನು ಬರೆದುಕೊಂಡಿದ್ದು ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಹೆಂಡತಿ ಲಕ್ಷ್ಮಮ್ಮಳಿಗೆ ಕೈಯಿಂದ ಮೈಕೈ, ಎದೆಗೆ, ತಲೆ ಮುಂದಲೆ ಹಿಡಿದು ಎಳೆದಾಡಿರುತ್ತಾರೆ ಎಂದು ನನ್ನ ಹೆಂಡತಿ ಹೇಳಿಕೆ ನೀಡಿರುತ್ತಾಳೆ ಎಂದು ನುಡಿಯುತ್ತಾರೆ. ಆರೋಪಿಯ ಗಂಡನ ಜೀವಿತಾವಧಿಯಲ್ಲಿ ನಾನು ಮತ್ತು ನನ್ನ ತಮ್ಮ ಆರೋಪಿಗೆ ಸರ್ವೆ ನಂ.130/3 ರಲ್ಲಿನ 19 ಗುಂಟೆ ಜಮೀನನ್ನು ಕರಾರನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಅಂದಿನಿಂದಲೂ ಇಲ್ಲಿಯವರೆಗೂ ಆರೋಪಿಯೇ ಸದರಿ ಜಮೀನನ್ನು ಉಳುಮೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಕ್ರಯದ ಕರಾರು ಮಾಡುವ ಸಮಯದಲ್ಲಿ ಎಷ್ಟು ಹಣವನ್ನು ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಯಾವುದೇ ಹಣವನ್ನು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಜಮೀನನ್ನು ಆರೋಪಿಯಿಂದ ಬಿಡಿಸಿಕೊಳ್ಳಲು ಆರೋಪಿ ಮತ್ತು ಆಕೆಯ ಮಕ್ಕಳ ವಿರುದ್ದ ವ್ಯಾಜ್ಯವನ್ನು ನಾನು ಹಾಕಿರುತ್ತೇನೆ ಎಂದರೆ ಸರಿ. ಸದರಿ ವ್ಯಾಜ್ಯದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ತಾತ್ಕಾಲಿಕ ನಿರ್ಬಂದಕಾಜ್ಞೆ ಪಡೆದ ನಂತರ ಸದರಿ ಜಮೀನನ್ನು ಆರೋಪಿಯಿಂದ ಪಡೆದುಕೊಳ್ಳಲು ಪ್ರಯತ್ನಿಸಿದ್ದು ಆರೋಪಿಯ ವಿರುದ್ದ ಜಗಳ ಮಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಮತ್ತು ನನ್ನ ಹೆಂಡತಿ ಹಲ್ಲೆ ಮಾಡಿ ಆಕೆಯ ಹಲ್ಲನ್ನು ಮುರಿದಿರುತ್ತೇನೆ ಮತ್ತು ಸದರಿ ವಿಚಾರವಾಗಿ ನಮ್ಮ ಮೇಲೆ ಒಂದು ಪ್ರಕರಣವು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಿಂದ ನಾವು ತಪ್ಪಿಸಿಕೊಳ್ಳಲು ಆರೋಪಿಯ ವಿರುದ್ದ ನಾವು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂದ ಇಲ್ಲದಿದ್ದರೂ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನಮ್ಮ ಜಮೀನಿನಲ್ಲಿ ಕೆಲಸ ಮಾಡುವ ಸಮಯದಲ್ಲಿ ಬಿದ್ದು ಈ ರೀತಿ ಪೆಟ್ಟು ಮಾಡಿಕೊಂಡಿದ್ದು ಆರೋಪಿಯೇ ಈ ಪೆಟ್ಟನ್ನು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಹೆಂಡತಿಗೆ ಹೊಡೆದಿರುವುದಿಲ್ಲ, ಸದರಿ ಜಮೀನು ಆರೋಪಿಯ ಸ್ವಾದೀನದಲ್ಲಿರುವ ಕಾರಣ ಆರೋಪಿಯು ಅತಿಕ್ರಮ ಪ್ರವೇಶ

ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅವಾಚ್ಯ ಶಬ್ದಗಳಲ್ಲಿ ಬೈದಿರುವುದಿಲ್ಲ ಮತ್ತು ನನ್ನ ಹೆಂಡತಿಗೆ ಕೈಯಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು,**
**ಅರಕಲಗೂಡು.**